

# ಇದು ಬಿಚ್ಚುಗತ್ತಿ ಭಂಟನ ಕತೆಯಲ್ಲ...

ನಾನು ಫೋರ್ಜರಿ ಮಾಡುತ್ತಿದ್ದವನ ಮಗಳು. ಅವನು ಅಂತಿಂತಹ ಫೋರ್ಜರಿ ಮಾಡೋ ಆಸಾಮಿಯಲ್ಲ. ‘ಓ ದುಡ್ಡಿಗೋಸ್ಕರ ಫೋರ್ಜರಿ ಮಾಡಿರಬೇಕು’ ಎಂದೋ, ‘ನಕಲಿ ನೋಟು ಪ್ರಿಂಟ್ ಮಾಡಿರಬೇಕು’ ಎಂದೋ, ‘ನಕಲಿ ಫೋಟೊ ಮಾಡಿರಬೇಕು’ ಎಂದೋ ನೀವು ಅಂದುಕೊಳ್ಳಬಹುದು. ಆದರೆ ನಮ್ಮಪ್ಪ ಆ ತರಹದ ಮನುಷ್ಯ ಅಲ್ಲ. ಅವನು ಸತತವಾಗಿ 30 ವರ್ಷ ನಕಲಿ ಕಾಗದಪತ್ರಗಳನ್ನ ಸೃಷ್ಟಿಮಾಡಿದ. ಅವನಿಗಾಗಿ ಅಲ್ಲ. ಶೋಷಿತರನ್ನು ಬಚಾವು ಮಾಡಲು ಅವನು ಹಾಗೆ ಮಾಡಿದ. ಎರಡನೇ ಮಹಾಯುದ್ಧದೊಂದಿಗೆ ಇದೆಲ್ಲ ಶುರುವಾಯಿತು. ಆಗ ನಮ್ಮಪ್ಪನ ವಯಸ್ಸು 17. ಆ ವಯಸ್ಸಿನಲ್ಲಿ ನಕಲಿ ಕಾಗದಪತ್ರಗಳನ್ನ ಮಾಡುವ ವರ್ಕ್‌ಶಾಪೊಂದನ್ನು ಸೇರಬೇಕಾದ ಒತ್ತಡಕ್ಕೆ ಅವನು ಸಿಕ್ಕಿಹಾಕಿಕೊಂಡ. ಬಹಳಬೇಗ ಆ ಕೆಲಸದಲ್ಲಿ ನಿಪುಣನಾಗಿಬಿಟ್ಟ. ಆದರದು ಅಷ್ಟಕ್ಕೆ ನಿಲ್ಲಲಿಲ್ಲ. ಯುದ್ಧದ ನಂತರವೂ 70ರ ದಶಕದವರೆಗೂ ಅವನ ಈ ಕೆಲಸ ನಿರಂತರವಾಗಿ ನಡೆಯಿತು.